ದಿನಾಂಕಃ25.06.2025 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಕೆ.ಪಿ., ವಕೀಲರಿಂದಃ

ನನ್ನ ತಾಯಿಯು ಈ ದಾವೆಯನ್ನು ಹೂಡಿದ್ದು, ಈ ಮೊದಲು ನಾನು ಅವರಿಂದ ಅಧಿಕಾರ ಪತ್ರ ಪಡೆದು ಸಾಕ್ಷ್ಯ ನುಡಿದಿದ್ದು, ನನ್ನ ತಾಯಿಯ ಮರಣದ ನಂತರ ಅದೇ ಸಾಕ್ಷ್ಯವನ್ನು ನಾನು ವಾರಸುದಾರರಾಗಿ ಬಂದಿದ್ದ ನಂತರವು ಅಳವಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಲ್ಲಿಸಿದ ತಕರಾರಿನ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ತಕರಾರಿನಲ್ಲಿ ಉಲ್ಲೇಖಿಸಿರುವ ದಾಖಲೆಗಳನ್ನು ಇಲ್ಲಿವರೆಗೂ ಹಾಜರುಪಡಿಸದೇ ಇರುವ ಕಾರಣ ನಾನು ಅವುಗಳನ್ನು ಪರಿಶೀಲಿಸಿಲ್ಲ. ನಾನು ಪ್ರತಿವಾದಿಗಳು ಉಲ್ಲೇಖಿಸಿದ ಪಹಣಿ ಪತ್ರಗಳನ್ನು ನೋಡಿದ್ದೇನೆ. ಮೊದಲು ಹಳೇ ಸರ್ವೇ ನಂಬರ್ 62/1 ಪ್ರಸ್ತುತದಲ್ಲಿ ಸರ್ವೇ ನಂಬರ್ 62/4 ಎಂದರೆ ಸರಿ. ಸರ್ವೇ ನಂಬರ್ 62/4 ರಲ್ಲಿ ಕೇವಲ 10 ಗುಂಟೆ ಜಮೀನು ಇದೆ ಎಂದರೆ ಸರಿ. ಪ್ರತಿವಾದಿಗಳಿಗೆ ಅಪ್ಪಣ್ಣನವರು ದಿಃ18.11.2000 ರಂದು ಕ್ರಯಪತ್ರದ ಮೂಲಖ ಮಾರಾಟ ಆಗಿತ್ತು ಎಂದರೆ ನಾನು ಕ್ರಯಪತ್ರವನ್ನು ನೋಡಿಲ್ಲ. ಪ್ರತಿವಾದಿಗಳ 10 ಗುಂಟೆ ಜಮೀನಿಗೆ ನಮಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಅಪ್ಪಣ್ಣನವರು ಸರ್ವೇ ನಂಬರ್ 62/1 ರಲ್ಲಿ 1 ಎಕರೆ 1 ಗುಂಟೆ ಪೈಕಿ 10 ಗುಂಟೆ ಜಮೀನನ್ನು ಪ್ರತಿವಾದಿಗಳಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಅದೇ ದಿನ ಸ್ವಾಧೀವನ್ನು ಅಸ್ತಾಂತರಿಸಿದರು ಎಂದರೆ ಸರಿ. ಈ 10 ಗುಂಟೆ ಜಮೀನಿನ ಪೂರ್ವ ದಿಕ್ಕಿನಲ್ಲಿ ಉಳಿದ ಜಮೀನು ಇತ್ತು ಎಂದರೆ ಪೂರ್ವ ಹಾಗೂ ಉತ್ತರ ದಿಕ್ಕಿನಲ್ಲಿ ಇತ್ತು. ಸದರಿ 10 ಗುಂಟೆ ಜಮೀನಿನ ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿ. ಉತ್ತರಕ್ಕೆ ರಸ್ತೆ ಹಾಗೂ ಸರ್ವೇ ನಂಬರ್ 62/1 ರ ಜಮೀನು ಎಂದರೆ ಸರಿ. ದಕ್ಷಿಣದ ಕಡೆ ವೆಂಕಟರವಣಪ್ಪ ರವರ ಆಸ್ತಿ ಎಂದರೆ ಸರಿ. 1 ನೇ ಪ್ರತಿವಾದಿ ಪಾತಕೋಟೆ ನಾರಾಯಣಪ್ಪ ನವರು ಮರಣ ಹೊಂದಿದ ನಂತರ ಅವರ ವಾರಸುದಾರರನ್ನು ಪ್ರತಿವಾದಿಗಳನ್ನಾಗಿ ಮಾಡಿದ್ದೇವೆ ಎಂದರೆ ಸರಿ. ಅದಲ್ಲದೆ 2 ರಿಂದ 5 ನೇ ಪ್ರತಿವಾದಿಗಳು

ಸಹಾ 1 ನೇ ಪ್ರತಿವಾದಿಯವರ ಕುಟುಂಬದವರು ಎಂದರೆ ಸರಿ. ಅಪ್ಪಣ್ಣನವರು ಮನೆ ಕಟ್ಟುವ ಉದ್ದೇಶದಿಂದ 10 ಗುಂಟೆ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಅವರ 10 ಗುಂಟೆ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡು ಉಳಿದ ಜಮೀನನ್ನು ಖಾಲಿ ಇಟ್ಟಿದ್ದಾರೆ ಎಂದರೆ ಸರಿಯಲ್ಲ ಅವರು ನಮ್ಮ ಜಮೀನನ್ನು ಒತ್ತುವರಿ ಮಾಡಿದ್ದಾರೆ. ಪ್ರತಿವಾದಿಗಳು ನಮ್ಮ ಜಮೀನಿನಲ್ಲಿ ಪೂ ಪ 10 ಅಡಿಗಳು ಉ.ದ. 60 ರಿಂದ 70 ಅಡಿಗಳ್ನು ಒತ್ತುವರಿ ಮಾಡಿದ್ದಾರೆ. ಈ ಪ್ರಕರಣದ ಚಾಲ್ತಿಯಲ್ಲಿದ್ದಾಗ ನಮ್ಮ ತಾಯಿ ಯಾವ ವ್ಯವಹಾರ ಮಾಡಿದ್ದಾರೆ ಎಂದು ನನಗೆ ಗೊತ್ತಿದೆ. ಸರ್ವೇ ನಂಬರ್ 62/7 ರಲ್ಲಿ ಕೇವಲ 10 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೇ ನಂಬರ್ 62/7 ಜಮೀನಿನಲ್ಲಿ ರಸ್ತೆ ಅಗಲೀಕರಣಕ್ಕಾಗಿ ಸರ್ಕಾರದವರು ಸ್ವಲ್ಪ ಜಮೀನನ್ನು ಸ್ವಾಧೀನ ಪಡೆದಿದ್ದರು, ಅದಕ್ಕೆ ನಮಗೆ ಪರಿಹಾರ ನೀಡಿದ್ದಾರೆ ಎಂದರೆ ಸರಿಯಲ್ಲ. ಪ್ರಸ್ತುತದಲ್ಲಿ ನಾವು 6 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದೇವೆ. ವಾದ ಪತ್ರದಲ್ಲಿ ನಾವು ಕೇವಲ 6 ಗುಂಟೆ ಕ್ಷೇತ್ರದಲ್ಲಿ ಸ್ವಾಧೀನಲ್ಲಿದ್ದೇವೆ ಎಂದು ತಿದ್ದುಪಡಿ ಮಾಡಿಕೊಂಡಿಲ್ಲ ಎಂದರೆ ಸರಿ. ಈ ದಾವೆ ಚಾಲ್ತಿಯಲ್ಲಿದ್ದಾಗ ಸರ್ವೇ ನಂಬರ್ 62/7 ರಲ್ಲಿನ 2 ಗುಂಟೆ ಜಮೀನನ್ನು ಟಿ ವಿ ಕೃಷ್ಣ ಮೂರ್ತಿಯವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆಯು ಟಿ ವಿ ಕೃಷ್ಣಮೂರ್ತಿಯವರಿಗೆ ಮಾಡಿಕೊಟ್ಟಂತಹ ಕ್ರಯದ ಕರಾರು ಪತ್ರದ ನಕಲು ಎಂದರೆ ಸರಿ. ( **ಕ್ರಯದ ಕರಾರು ಪತ್ರದ ದೃಢೀಕೃತ ನಕಲನ್ನು ನಿಡಿ.1 ಎಂದು ಗುರುತಿಸಲಾಯಿತು**) ನಿಡಿ.1 ರಲ್ಲಿ ಬರೆದಿರುವ ಅಂಶಗಳು ಸರಿ ಇದೆ. ನಿಡಿ.1 ರಲ್ಲಿ ಪಶ್ಚಿಮದ ಕಡೆಗೆ ಮಮತ ಮತ್ತು ಪ್ರತಿವಾದಿಗಳ ಜಮೀನು ಇದೆ ಎಂದು ಕಾಣಿಸಿದ್ದೇವೆ ಎಂದರೆ ಸರಿ, ಆದರೆ ಈ ಕ್ರಯದ ಕರಾರು ಪತ್ರ ಮಾಡಿದ ನಂತರವೇ ಪ್ರತಿವಾದಿಗಳು ಒತ್ತುವರಿ ಮಾಡಿದ್ದಾರೆ ಎಂದು ತಿಳಿದು ಬಂದಿತ್ತು. ನಿಡಿ.1 ನ್ನು ಈ ದಾವೆಯ ಮೊದಲು ಮಾಡಲಾಗಿತ್ತು ಎಂದರೆ ಸರಿ. ದಾವೆಯನ್ನು ದಿಃ28.10.2016 ರಂದು ಹೂಡಿದ್ದೇವೆ.

ಸರ್ವೇ ನಂಬರ್ 62/7 ರಲ್ಲಿನ 2 ಗುಂಟೆ ಜಮೀನನ್ನು ಕೆ ಎಸ್ ಮಮತ ರವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆಯು ಕೆ ಎಸ್ ಮಮತ ರವರಿಗೆ ಮಾಡಿಕೊಟ್ಟಂತಹ ಕ್ರಯದ ಕರಾರು ಪತ್ರದ ನಕಲು ಎಂದರೆ ಸರಿ. ( **ಕ್ರಯದ ಕರಾರು ಪತ್ರದ ದೃಢೀಕೃತ ನಕಲನ್ನು ನಿಡಿ.2 ಎಂದು ಗುರುತಿಸಲಾಯಿತು**) ನಿಡಿ.2 ರಲ್ಲಿ ಬರೆದಿರುವ ಅಂಶಗಳು ಸರಿ ಇದೆ. ಮಮತ ರವರಿಗೆ ಮಾರಾಟ ಮಾಡಿದ್ದ ಜಮೀನಿನ ಪಶ್ಚಿಮಕ್ಕೆ ಟಿ ವಿ ಕೃಷ್ಣಮೂರ್ತಿ ರವರಿಗೆ ಮಾರಾಟ ಮಾಡಿದ್ದ ಜಮೀನು. ಮಮತ ರವರ ಪೂರ್ವದಲ್ಲಿ ನಮ್ಮ ಉಳಿಕೆ ಜಮೀನು ಇದೆ ಎಂದರೆ ಪೂರ್ವ ಹಾಗೂ ಉತ್ತರ ದಿಕ್ಕಿನಲ್ಲಿ ಇದೆ. ನಿಡಿ.2 ರಲ್ಲಿ ಮಮತ ರವರಿಗೆ ಮಾರಾಟ ಮಾಡಿದ್ದ ಜಮೀನಿನ ಉತ್ತರಕ್ಕೆ 15 ಅಡಿ ರಸ್ತೆ ಇದೆ ಎಂದು ಕಾಣಿಸಿದ್ದೇವೆ ಎಂದರೆ ಸರಿ, ಆದರೆ ಅದು ಖಾಸಗಿ ರಸ್ತೆ ಯಾಗಿದ್ದು ಅದು ನಮ್ಮ ಸರ್ವೇ ನಂಬರ್ ನಲ್ಲೇ ಮಾಡಿದ್ದೇವೆ. ನಿಡಿ.2 ರ ಪ್ರಕಾರ ದಕ್ಷಿಣಕ್ಕೆ ವೆಂಕಟರವಣ ರವರ ಜಮೀನು ಎಂದರೆ ಸರಿ. ಟಿ ವಿ ಕೃಷ್ಣಮೂರ್ತಿ ಮತ್ತು ಪ್ರತಿವಾದಿಗಳ ಜಮೀನಿನ ನಡುವೆ ನಮ್ಮ ಉಳಿಕೆ ಜಮಿನು ಇದೆ ಎಂದು ತೋರಿಸಲು ನಾವು ಇದುವರೆಗೂ ನ್ಯಾಯಾಲಯಕ್ಕೆ ನೀಡಿಲ್ಲ. ನಾನು ಪ್ರಮಾಣ ಪತ್ರವನ್ನು ಸಹಾ 10 ಗುಂಟೆ ಜಮೀನಿನ ಬಗ್ಗೆ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಕೇವಲ ಒತ್ತುವರಿ ಮಾಡಿದ ಜಾಗದ ಬಗ್ಗೆ ಪರಿಹಾರ ಕೇಳುತ್ತಿದ್ದೇನೆ.

ವಾದ ಪತ್ರದಲ್ಲಿ ಕಾಣಿಸಿದ್ದ ದಾವಾ ಆಸ್ತಿಯ ಪೂರ್ವದಲ್ಲಿ ಶಾಂತಮ್ಮ, ಪಶ್ಚಿಮಕ್ಕೆ ಪ್ರತಿವಾದಿಗಳು, ಉತ್ತರಕ್ಕೆ ಕಿಟ್ಟಣ್ಣ ಮತ್ತು ಸುಬ್ಬರಾಯಪ್ಪ ಹಾಗೂ ಹೈವೆ ರಸ್ತೆ ಮತ್ತು ದಕ್ಷಿಣಕ್ಕೆ ವೆಂಕಟರಮಣಪ್ಪ ರವರ ಆಸ್ತಿ ಎಂದು ತೋರಿಸಿದ್ದೇರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಈಗ ಹೇಳಿದ ಚಕ್ಕುಬಂದಿಯ ನಡುವೆ ಇರುವ ಆಸ್ತಿ ಎಂದರೆ ಸರಿ. ಪ್ರತಿವಾದಿಗಳ ಜಮೀನನ್ನು ಈಗಾಗಲೇ ಅಳತೆ ಮಾಡಲಾಗಿದೆ. ಪ್ರತಿವಾದಿಗಳ ಜಮೀನಿನ ಸ್ವಲ್ಪ ಕ್ಷೇತ್ರವನ್ನು ಸರ್ಕಾರದವರು ಭೂ ಸ್ವಾಧೀನ ಪಡೆದುಕೊಂಡಿದ್ದಾರೋ ಅಥವಾ ಇಲ್ಲವೊ ಎಂದು ನಾನು ನಿಖರವಾಗಿ ಹೇಳಲಾಗುವುದಿಲ್ಲ, ಆದರೆ ಮುಖ್ಯ ವಿಚಾರಣೆಯಲ್ಲಿ ಭೂ

ಸ್ವಾಧೀನ ಆಗಿದೆ ಎಂದು ತಿಳಿಸಿದ್ದೆ. ಅಂದಾಜು 2 ಅಥವಾ 3 ಗುಂಟೆ ಜಮೀನು ಪ್ರತಿವಾದಿಗಳು ಭೂ ಸ್ವಾಧೀನದಲ್ಲಿ ಕಳೆದಿದ್ದರು. ಪ್ರತಿವಾದಿಗಳು ಪ್ರಸ್ತುತದಲ್ಲಿ ಎಷ್ಟು ಕ್ಷೇತ್ರದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಇಲ್ಲಿಯವರೆಗೂ ಬೇರೆ ಯಾವುದೇ ಜಮೀನಿನಲ್ಲಿ ಒತ್ತುವರಿ ಮಾಡಿಲ್ಲ, ಅವರು 10 ಗುಂಟೆಗಿಂತ ಹೆಚ್ಚು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳು ಇಲ್ಲದಿದ್ದರೂ ಹಾಗೂ ನಾನು ನೋಡದೇ ಇದ್ದರು ಪ್ರತಿವಾದಿಗಳು 3 ರಿಂದ 4 ಗುಂಟೆ ಜಮೀನನ್ನು ಭೂ ಸ್ವಾಧೀನದಲ್ಲಿ ಕಳೆದಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಗಳು 10 ಗುಂಟೆ ಜಮೀನನಲ್ಲಿ ಸ್ವಾಧೀನದಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೂಲ ಜಮೀನು ಕ್ಷೇತ್ರದಲ್ಲಿ ಮೊದಲು ಪ್ರತಿವಾದಿಗಳಿಗೆ ಮಾರಾಟ ಮಾಡಿದ್ದು, ನಂತರ ಉಳಿದ ಜಮೀನಿನಲ್ಲಿ ಟಿ ವಿ ಕೃಷ್ಣಮೂರ್ತಿ ರಿವರಿಗೆ ಮಾರಾಟ ಮಾಡಿ ಅದರ ಪೂರ್ವದಲ್ಲಿ ಮಮತರವರಿಗೆ ಮಾರಾಟ ಮಾಡಿದ್ದು ಪ್ರತಿವಾದಿಗಳ ಜಮೀನಿಗೆ ಅಂಟಿಕೊಂಡಂತೆ ನಮ್ಮ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ಕೋರ್ಟ್ ಕಮೀಷನರ್ ರವರಿಗೆ ಕೃಷ್ಣಮೂರ್ತಿ ಹಾಗೂ ಮಮತ ರವರಿಗೆ ಮಾರಾಟ ಮಾಡಿದ ಬಗ್ಗೆ ತಿಳಿಸಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಮಾರಾಟ ಮುಗಿದಿರಲಿಲ್ಲ. ಟಿ ವಿ ಕೃಷ್ಣ ಮೂರ್ತಿ ಮತ್ತು ಮಮತರವರು ಖರೀದಿ ಮಾಡುವ ಆಸ್ತಿಯಲ್ಲಿ ಸ್ವಾಧೀನಲ್ಲಿದ್ದಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನಮ್ಮ ತಾಯಿಯವರು ಹೂಡಿದ್ದ ದಾವೆಯಲ್ಲಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿ. ಆ ಪ್ರಕರಣವು ಇದೇ ನ್ಯಾಯಾಲಯಲ್ಲಿ ವಿಚಾರಣೆಗೆ ಒಳಗೊಂಡು ಮುಕ್ತಾಯವಾಗಿದೆ ಎಂದರೆ

ಸರಿ.  ಈ ದಾವೆ ಚಾಲ್ತಿಯಲ್ಲಿದ್ದಾಗಲೆ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಟಿ ವಿ ಕೃಷ್ಣಮೂರ್ತಿ ಮತ್ತ ಮಮತ ರವರಿಗೆ ಈ ಪ್ರಕರಣದಲ್ಲಿ ಪಕ್ಷಗಾರರಾನ್ನಾಗಿ ಮಾಡಲು ಯಾವುದೆ ತೊಂದರೆ ಇಲ್ಲ.  ಪ್ರತಿವಾದಿಗಳು ಸ್ವಾಧೀನದಲ್ಲಿರುವ 10 ಗಂಟೆ ಜಮೀನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡಿದ್ದ 4 ಗುಂಟೆ ಜಮೀನಿಗೆ ನಮಗೆ ಈಗ ಸಂಬಂಧ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

C/c. ಅಪರ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.